ಅವರು ಬರಲಿಲ್ಲ. ಈಗಲೂ ಅವರಿಗೆ ಕಾದು ಕಾದು ಕಣ್ಣು ಮಂಜಾಗುತ್ತವೆ. ಆದರೂ ಆಸೆಬಿಟ್ಟಿಲ್ಲ. ಇಂದೋ ನಾಳೆಯೋ ಬರುತ್ತಾರೆಂಬ ನಂಬಿಕೆ ನನಗಿದೆ. ಅವರು ಜೀವದಿಂದಿರುವರಾದರೆ, ಆದರೆ ಅವರು ತಮ್ಮ ಪ್ರಾಣಕ್ಕೆ ಏನಾದರೂ ಮಾಡಿಕೊಂಡರೆಂಬುದನ್ನು ನನ್ನ ಮನಸ್ಸು ಒಪ್ಪುವುದಿಲ್ಲ. ಅವರಿಗೆ ಬದುಕು ಯಾವತ್ತೂ ಪ್ರಿಯವಾಗಿತ್ತು. ಹಾಗಾದರೆ ಅವರು ನನಗೂ ಸಹ ಒಂದು ಮಾತನ್ನೂ ಹೇಳದೆ ಹೋದದ್ದೆಲ್ಲಿ? ಕಚೇರಿಯಿಂದ ನೇರ ಮನೆಗೆ ಬಂದುಬಿಡುತ್ತಿದ್ದ ಅವರು ಅಂದೇಕೆ ಬರದೆಹೋದರು. ಹೊಟ್ಟೆಯ ಮಗನನ್ನು, ಕಟ್ಟಿಕೊಂಡವಳನ್ನು ಬಿಟ್ಟು ಹೋಗುವಷ್ಟೇನೂ ಅವರು ರೋಸಿರಲಿಲ್ಲ. ಎಲ್ಲ ಆಶ್ಚರ್ಯವೆನ್ನಿಸುತ್ತದೆ ಮಗಳೆ.

ಆದರೊಂದು ಅವರು ಹೋಗುತ್ತ ನನಗೆ ಕೆಟ್ಟ ಹೆಸರು ತಂದಿಟ್ಟರು. ನಾನು ಮಗುವನ್ನು ಸಾಕಲು ಬಂಧು ಬಳಗ, ಜನ ಇವರೊಂದಿಗೆ ಏಗಿ ಏಗಿ ಕಣ್ಣೀರು ಹನಿಸುವಂತೆ ಮಾಡಿದರು. ನಾನೊಬ್ಬಳೇ ಜನರಾಡುವ ಕುಹಕಮಾತಿಗೆ, ಕಲ್ಪಿಸುತ್ತಿದ್ದ ಅಸಹ್ಯ ಸಂಬಂಧಗಳಿಗೆ ನೊಂದು, ಮನೆಯ ಹಿಂದಿನ ಮಾವಿನಮರದ ಬುಡಕ್ಕೆ ಕುಳಿತು ಎಷ್ಟು ಅತ್ತಿದ್ದೆನೋ ಪರಮಾತ್ಮನಿಗೇ ಗೊತ್ತು. ಈ ಮಗುವೊಂದಿರದಿದ್ದರೆ ಏನಾಗಿಹೋಗುತ್ತಿದ್ದೆನೋ. ದೇವರು ದೊಡ್ಡವನು – ಆಸರೆಗಾಗಿ ಏನಾದರೊಂದು ಉಳಿಸುತ್ತಾನೆ.

ಅಪ್ಪನ ಅರ್ಧ ಅಕ್ಕರೆಯಷ್ಟೇ ಪಡೆದು ಬೆಳದಿದ್ದರಿಂದಲೋ, ಇಲ್ಲ, ದಿಕ್ಕೆಟ್ಟು ಮಾತು ಕಳೆದುಕೊಂಡ ನನ್ನೊಡನೆ ಇದ್ದುದರಿಂದಲೋ ಈ ಹುಡುಗನಿಗೆ ಮಾತು ಕಡಿಮೆ. ಯಾವಾಗಲೂ ಗುಂಗಿನಲ್ಲಿರುತ್ತಾನೆ. ತನ್ನಷ್ಟಕ್ಕೆ ತಾನೇ ಗೊಣಗಿಕೊಳ್ಳುತ್ತಿರುತ್ತಾನೆ. ಅದೂ ಇಲ್ಲವೆಂದರೆ, ತೋಟದ ಹೂಗಳೊಂದಿಗೆ ಕಾಲಕಳೆಯುತ್ತಾನೆ. ಅಥವಾ ಖೋಲಿಯಲ್ಲಿ ಪುಸ್ತಕ ಹಿಡಿದು ಕೂತಿರುತ್ತಾನೆ. ಅವ ಮಾತಾಡದಿದ್ದರೂ ನನ್ನ ಮೇಲೆ ಬಹಳ ಪ್ರೀತಿ. ಅಮ್ಮ ಅಂದರೆ ಅಭಿಮಾನ. ಆದರೆ, ಕೇಳಿಸಿಕೋ ಮಗಳೇ, ನನಗೊಂದೇ ಭಯವಿರುವುದು, ಎಲ್ಲಿ ಅವನೂ ಅಪ್ಪನಂತೆ ಹೇಳದೆ – ಕೇಳದೆ ಧುತ್ತೆಂದು ಎದ್ದು ಹೊರಟುಬಿಡುತ್ತಾನೊ ಅಂತ. ಹಾಗೆ ಮಾಡದಿರಲೆಂದು ದಿನವೂ ದೇವರಿಗೆ ನಂದಾದೀಪ ಹಚ್ಚುತ್ತೇನೆ.

ಈಗ ನೆನಪಾಗುತ್ತಿದೆ. ಈ ಮೊದಲೇ ನಿನ್ನನ್ನಲ್ಲೋ ನೋಡಿದ್ದೆ ಅಂದುಕೊಳ್ಳುತ್ತಿದ್ದೆನಲ್ಲವೆ? ಬಹುಶಃ ಮಗುವಿನ ಖೋಲಿಯಲ್ಲಿ ಯಾವುದೋ ಪುಸ್ತಕದಲ್ಲಿ ನಿನ್ನ ಚಿತ್ರವಿತ್ತು. ನನಗೆ ಆಶ್ಚರ್ಯವೆನ್ನಿಸುತ್ತದೆ. ಅವನು ನೀ ಬಂದಮೇಲೆ ಎಷ್ಟು ಬದಲಾಗಿದ್ದಾನೆ ಗೊತ್ತೇನು? ಅವನ ಮುಖದಲ್ಲೀಗ ಕಳೆ ತುಂಬಿ ತುಳುಕುತ್ತಿದೆ. ಗೆಲುವು ಮೂಡಿದೆ. ಮಾತನಾಡಿಸಿದೆ. ಅಂಥದ್ದೇನಿದೆ ಮಗಳೇ ನಿನ್ನಲ್ಲಿ? ಎಂತಾದರೂ ಇರಲಿ, ನಿನ್ನಿಂದಾಗಿ ಅವನಿಗೊಲವು ಮೂಡಿದರೆ ನಾನೇಕೆ ಬೇಡವೆನ್ನಲಿ? ಹೌದಮ್ಮ, ನನಗೆ ಬಹಳ ಸಂತೋಷವಾಗುತ್ತಿದೆ. ನೀನು ನನ್ನ ಮಗನ ನಗುವನ್ನು ಕಡೆಯವರೆಗೂ ಉಳಿಸುವುದಾದರೆ ಇನ್ನೂ ಸಂತೋಷವಾಗುತ್ತದೆಂದು ನಿನಗೆ ಹೇಗೆ ತಿಳಿಸಲಿ? ನನಗೇನೂ ನಿನ್ನ ಕುಲಗೋತ್ರ ವಿಚಾರ ಬೇಕಿಲ್ಲ. ದೇವರು ನಿನಗೆ ದೇವತೆಯ ಚೆಲವು ಕೊಟ್ಟಿದ್ದಾನೆ. ಸಾಹಿತ್ಯ–ಸಂಗೀತ ಬಲ್ಲವಳಂತೆ. ನನಗಾದರೂ ನಾಕು ದೇವರ ನಾಮಗಳು ಗೊತ್ತಷ್ಟೇ. ನೀನು ಕಲಿತವಳಂತೆ – ನಾನು ಅಪ್ಪನ ಮನೆಯಲ್ಲಿದ್ದಾಗ ಮಠದಲ್ಲಿ ಅಕ್ಷರ ತಿದ್ದಿದ್ದೇನೆ. ಕಮಕಮ ಓದಲೂ ಬರುತ್ತದೆ.

ಸಂಕೋಚವಾಗುತ್ತಿದೆ ಮಗಳೇ. ಆದರೂ ಹೇಳುವೆ ಏನನ್ನುತ್ತೀಯ ನೀನು? ನಮ್ಮಲ್ಲೇ ಇರುವುದಾದರೆ ಅದು ಬಹಳ ಚೆಂದ. ನಿನಗೆ ಹೊಸಹೊಸ ಅಡುಗೆ ಹೇಳಿಕೊಡುವೆ ನಾನು.